ಫಳ ಮಿಂಚುತ್ತಿದ್ದ ಅದರ ಬಳುಕುವ ಮೈ ಸುಮತಿಗೆ ಕಾಣಿಸಿತ್ತು. ಮುಂದೆ ಏಕೋ ತೀರ್ಥಹಳ್ಳಿ ಬರುವವರೆಗೆ ಅವನ ಕಣ್ನೋಟ ತನ್ನ ಮೈಮೇಲೆ ಹರಿದಾಗಲೆಲ್ಲಾ ಫಳ ಫಳ ಹೊಳೆದು ಸರಿದುಹೋದ ಆ ಹಾವಿನ ನೆನಪಾಗಿತ್ತು. ಅದೇ ಹೊಳಪು ಅವನ ಕಣ್ಣಲ್ಲೂ.

ತೀರ್ಥಹಳ್ಳಿಯ ಬಸ್‌ಸ್ಟ್ಯಾಂಡ್ ಹೋಟೆಲ್ಲಿನ ಮುಂದೆ ಮಧ್ಯಾಹ್ನದ ಕಾಫಿಗಾಗಿ ಬಸ್ ನಿಲ್ಲಿಸಿದಾಗ ಇಳಿದು ಹೋಗಲು ಆಕೆಗೆ ಬೇಸರವಾಗಿತ್ತು. ಇಷ್ಟರ ಮೇಲೆ ಈ ಹಳ್ಳಿ ಹೋಟೆಲ್‌ಗಳ ಕಾಫಿಯಾದರೂ ಹೇಗಿರತ್ತೋ ದೇವರಿಗೇ ಗೊತ್ತು!

'ಬನ್ನಿ ಮಿಸ್, ಕಾಫಿ ಕುಡಿದು ಬರೋಣ.'

ಇದುವರೆಗೆ ಬರಿ ಕಣ್ಣಿಗೆ ಕೆಲಸ ಕೊಟ್ಟವನು ಈಗ ನಾಲಗೆಗೂ ಕೆಲಸ ಕೊಟ್ಟ. ನಯವಾಗಿ ಕರೆದಾಗ ತಾನು ಕುಳಿತ ಸೀಟಿನಲ್ಲಿ ತನ್ನ ಏರ್‌ಬ್ಯಾಗ್ ಇಟ್ಟು ಕೆಳಗಿಳಿದಳು. ಅವನೊಂದಿಗೆ ಹೋಗಲು ನಾಚುವುದಕ್ಕೆ ತಾನೇನು ಹಳ್ಳಿಯ ಹುಡುಗಿಯೆ? ಬೆಂಗಳೂರಿನಲ್ಲಿ ಇರುವವಳು. ಕಾಲೇಜ್ ಕಲಿತವಳು, ಆಫೀಸಿನಲ್ಲಿ ನೂರಾರು ಗಂಡಸರ ನಡುವೆ ಕೆಲಸ ಮಾಡುವವಳು. ಗಂಡಸರನ್ನು ಎದುರು ಕಂಡಾಗ 'ಮುಟ್ಟಿದರೆ ಮುನಿಯಾಗುವ' ತರಹವಲ್ಲ ಅವಳು. ಇಷ್ಟರ ಮೇಲೆ ಅವನಾದರೂ ತನಗೇನು ಮಾಡುತ್ತಾನೆ? ಇನ್ನು ಸ್ವಲ್ಪ ಹೊತ್ತಿಗೆ ಅವನೆಲ್ಲೋ, ತಾನೆಲ್ಲೋ, ಆಮೇಲೆ ಆಜನ್ಮ ಪರ್ಯಂತ ತನ್ನ ಅವನ ಭೇಟಿ ಆಗದೆಯೇ ಇರಬಹುದು. ಜೊತೆಗಿರುವ ಈ ಕೆಲವು ನಿಮಿಷಗಳಲ್ಲಿ ಪರಸ್ಪರ ತೊಂದರೆಗೆ ಅವಕಾಶವಿಲ್ಲದೆ ಮನಸ್ಸಿಗೆ ಸುಖ ಲಭಿಸುವಂತಿದ್ದರೆ ಅದರಲ್ಲಿ ತಪ್ಪೇನು? ಅವನಾದರೂ ಇದುವರೆಗೆ ತನ್ನನ್ನು ನೋಡುವುದಲ್ಲದೆ ಮತ್ತೆ ಯಾವುದೇ ವಿಧವಾದ ಅಪಚಾರವನ್ನೂ ಮಾಡಿರಲಿಲ್ಲ. ಮೇಲೆ 'ಏನಪ್ಪಾ, ಇಷ್ಟು ನಾಚಿಕೆ ಬಿಟ್ಟು ತನ್ನನ್ನು ತಿನ್ನೋ ಹಾಗೆ ನೋಡ್ತಾ ಇದಾನೆ' ಎಂದುಕೊಂಡರೂ ಒಳಗೊಳಗೆ ತನಗೂ ಅದು ಬೇಕಾಗಿಲ್ಲವೆ? ಅವನಷ್ಟು ಧೈರ್ಯವಾಗಿ ದಿಟ್ಟಿಸಿ ನೋಡದಿದ್ದರೂ ಆಗಾಗ್ಗೆ ತಾನು ಅವನನ್ನು ಕದ್ದುನೋಡಿ ಮೆಚ್ಚಿಲ್ಲವೆ?

'ಏನು ಮೇಡಂ, ಏನು ತೊಗೊಳ್ತೀರಾ?' ಎಂದಾಗ,

'ಏನೂ ಬೇಡ, ಬರೀ ಕಾಫಿ' ಎಂದರೂ ಅವನು ಎರಡು ಪ್ಲೇಟ್ ಇಡ್ಲಿಗೆ ಆರ್ಡರ್ ಮಾಡಿದ್ದ. ತಿನ್ನುವ ನಡುವೆಯೇ ಯಾವ ಊರಿಂದ ಬಂದಿದ್ದು. ಎಲ್ಲಿ ಗೋಗುತ್ತಾ ಇರೋದು, ಕಾರಣ ಎಲ್ಲಾ ಪ್ರಶ್ನಿಸಿ ತಿಳಿದಾಯಿತು ಅವನು. 'ದೇವಂಗಿಯ ಗಣಪತಿ ಭಟ್ಟರ ಮನೆಗೆ ಹೋಗುತ್ತಿರುವುದು' ಎಂದಾಗ, 'ಓಹೋ ಅವರೇ? ನನಗೆ ಚೆನ್ನಾಗಿ ಗೊತ್ತು. ಅವರ ಎರಡನೇ ಮಗನೂ ನಾನೂ ಒಟ್ಟಿಗೇ ಕಾಲೇಜಿನಲ್ಲಿ ಓದಿದ್ದು. ನಾನೂ ದೇವಂಗಿಗೇ ಹೋಗ್ತಾ ಇರೋದು' ಎಂದ. ಹಾಗಾದರೆ ದೇವಂಗಿಯವರೆಗೂ ಅವನು ತನಗೆ ಜೊತೆ. ಮುಂದೆ ಮಾಲತಿಯ ಮಾವ ಗಣಪತಿ ಭಟ್ಟರು ಅವನಿಗೆ ಪರಿಚಯ. ಅವರ ಮಗ ಕ್ಲಾಸ್‌ಮೇಟ್ ಎಂದ ಮೇಲೆ ಅವರ ಮನೆಗೂ ಬರಬಹುದು. ಆಮೇಲೆ... ಮಾಣಿ ಎರಡು ಕಾಫಿ ಲೋಟಗಳನ್ನು ಸಶಬ್ದವಾಗಿ ಮೇಜಿನ ಮೇಲೆ ಇಟ್ಟಾಗ ಯೋಚನೆಯ ಸರಣಿ ಕಡಿದಿತ್ತು. ಬಸ್ಸಿನ ಬಳಿ ಹಿಂತಿರುಗಿ ಬರುವಾಗಲೇ ಯೋಚನೆ– ಅವನು ತನ್ನ ಪಕ್ಕದ ಖಾಲಿ ಸೀಟಿನಲ್ಲಿ ಕೂಡಲೇ ಎಂದು ಕೇಳಿದರೆ ಅಥವಾ ತನ್ನ ಪಕ್ಕದ ಸೀಟಿಗೆ ಕರೆದರೆ ಏನು ಹೇಳುವುದು? ಅಷ್ಟು ಸಲಿಗೆ ಅವನಿಗೆ ಕೊಡಬಾರದಾಗಿತ್ತು. ಈಗ ಅವನ ದುಡ್ಡಿನಲ್ಲಿ ಇಡ್ಲಿ ತಿಂದ ಋಣ ಬೇರೆ. ಎರಡು ಸೇಬಿನ ಹಣ್ಣುಗಳನ್ನು ಕೊಂಡು ಅವನ ಋಣ ತೀರಿಸಿಬಿಡಬೇಕು ಎಂದುಕೊಂಡು ಬಸ್ ಹತ್ತಿ ಒಳಬಂದಾಗ ತನ್ನ ಪಕ್ಕದ ಸೀಟಿನಲ್ಲಿ ಬಂದು ಕುಳಿತಿದ್ದ ಮುದುಕಿಯನ್ನು ನೋಡಿ ಉಸಿರು ಸರಾಗವಾಗಿ ಹೊರಹೊಗಿತ್ತು.